**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

**ಸಂಖ್ಯೆ: ಕಸಂವಿ/ಪರೀಕ್ಷಾಂಗ/ವಿ.ವಾ/ಹಾಗೂ ವಿ.ಆ/2021–22** **ದಿನಾಂಕ: 01/04/2022**

# ಅಧಿಸೂಚನೆ

ವಿಷಯ: **2019–20 ನೇ ಸಾಲಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪಿ.ಹೆಚ್.ಡಿ (ವಿದ್ಯಾವಾರಿಧಿ) ಕೋರ್ಸ್‌ವರ್ಕ್ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಂದ ಪರೀಕ್ಷಾ ಅರ್ಜಿಗಳನ್ನು ಆಹ್ವಾನಿಸುವ ಬಗೆಗೆ.**

| ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ | ಡಿ.ಡಿ.ಯನ್ನು ಸ್ವೀಕರಿಸುವ ಕೊನೆಯ ದಿನಾಂಕ | ವಿಳಂಬ ಶುಲ್ಕದೊಂದಿಗೆ ಬ್ಯಾಂಕ್ ಹುಂಡಿ ತೆಗೆಯುವ ದಿನಾಂಕ | ಬ್ಯಾಂಕ್ ಹುಂಡಿಗಳ ಸಹಿತ ಅರ್ಜಿಗಳನ್ನು ಅಧ್ಯಯನಾಂಗದ ಕಾರ್ಯಾಲಯಕ್ಕೆ ತಲುಪಿಸುವ ದಿನಾಂಕ |
|---|---|---|---|
| **05/04/2022** | **06/04/2022** | **07/04/2022** | **08/04/2022** |

**ಸೂಚನೆಗಳು:–**

1. ವಿದ್ಯಾರ್ಥಿಗಳು ಅರ್ಜಿಗಳನ್ನು ಅಧ್ಯಯನಾಂಗದ ಮುಖಾಂತರ ಸಲ್ಲಿಸುವುದು. ಯಾವುದೇ ಕಾರಣಕ್ಕೂ ಅರ್ಜಿಗಳನ್ನು ಪರೀಕ್ಷಾಂಗವು ನೇರವಾಗಿ ಸ್ವೀಕರಿಸುವುದಿಲ್ಲ.
2. ಪರೀಕ್ಷಾ ಶುಲ್ಕದ ಹುಂಡಿ (ಡಿ.ಡಿ.)ಯನ್ನು **"ಹಣಕಾಸು ಅಧಿಕಾರಿಗಳು, ಪರೀಕ್ಷಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು (Finance Officer, Exam Section, Karnataka Samskrit University, Bangalore)"** ಈ ಹೆಸರಿನಲ್ಲಿ ಪಡೆದು ನಿಗದಿತ ದಿನಾಂಕದಂದು ಅರ್ಜಿಯೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.
3. **ಪರೀಕ್ಷೆಯನ್ನು ತೆಗೆದುಕೊಳ್ಳುವ ಎಲ್ಲಾ ಅಭ್ಯರ್ಥಿಗಳಿಂದ ಇತ್ತೀಚಿನ 2 ಭಾವ ಚಿತ್ರಗಳನ್ನು ಪಡೆದು ಒಂದನ್ನು** ಅರ್ಜಿಗೂ, ಮತ್ತೊಂದನ್ನು ಪ್ರವೇಶ ಪತ್ರಕ್ಕೂ ಲಗತ್ತಿಸಿ ಅಧ್ಯಯನಾಂಗದ ನಿರ್ದೇಶಕರು ದೃಢೀಕರಿಸಿ ಕಳುಹಿಸುವುದು.

## ಪರೀಕ್ಷಾ ಶುಲ್ಕದ ವಿವರ.

| ಕ್ರ.. ಸಂ | ಪರೀಕ್ಷೆಗಳ ವಿವರ | ಪರೀಕ್ಷಾ ಶುಲ್ಕ | ಅರ್ಜಿ ಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು ಮೊತ್ತ | ವಿಳಂಬ ಶುಲ್ಕ |
|---|---|---|---|---|---|---|
| 1. | ಪಿ.ಹೆಚ್.ಡಿ (ವಿದ್ಯಾವಾರಿಧಿ) – ಕೋರ್ಸ್‌ವರ್ಕ್ | ಕೋರ್ಸ್‌ವರ್ಕ್ ಪರೀಕ್ಷೆ – 950/– | **20.00** | **30.00** | **1000.00** | **100.00** |

4. ಅರ್ಜಿಯಲ್ಲಿ ಕಡ್ಡಾಯವಾಗಿ ತಂದೆ ಹಾಗೂ ತಾಯಿಯ ಹೆಸರನ್ನು ನಮೂದಿಸುವುದು. ಜನ್ಮ ದಿನಾಂಕಕ್ಕೆ ಸಂಬಂಧಪಟ್ಟ ದಾಖಲೆ ಜೆರಾಕ್ಸ್ ಪ್ರತಿಯನ್ನು ದೃಢೀಕರಿಸಿ ಸಲ್ಲಿಸುವುದು.
5. ಪಿ.ಹೆಚ್.ಡಿ ಕೋರ್ಸ್‌ವರ್ಕ್ ಪರೀಕ್ಷಾ ವಿದ್ಯಾರ್ಥಿಗಳ ಅರ್ಜಿ ಮತ್ತು ನಾಮಾಂಕಿತ ಪಟ್ಟಿಗಳನ್ನು ವಿಭಾಗವಾರು ಪ್ರತ್ಯೇಕವಾಗಿ ಸಲ್ಲಿಸಬೇಕು.
6. ನಾಮಾಂಕಿತ ಪಟ್ಟಿಗಳಲ್ಲಿ ಮತ್ತು ಅರ್ಜಿ ನಮೂನೆಗಳಲ್ಲಿ ಏನಾದರೂ ದೋಷಗಳು ಕಂಡುಬಂದಲ್ಲಿ ಸಂಬಂಧಪಟ್ಟ ಅಧ್ಯಯನಾಂಗದವರೆ ನೇರ ಹೊಣೆಗಾರರಾಗಿರುತ್ತಾರೆ.

7. ಅರ್ಜಿಯನ್ನು ಅಭ್ಯರ್ಥಿಗಳು ಅಧಿಕೃತ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು.

**<u>ಆದೇಶದ ಮೇರೆಗೆ</u>,**

**ಪರೀಕ್ಷಾ ನಿಯಂತ್ರಕರು**
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಪ್ರತಿಗಳು

- ನಿರ್ದೇಶಕರು, ಅಧ್ಯಯನಾಂಗ. ಕ.ಸಂ.ವಿ. ಬೆಂಗಳೂರು.
- ಎಲ್ಲಾ ವಿಭಾಗಾಧ್ಯಕ್ಷರು. ಕ.ಸಂ.ವಿ. ಬೆಂಗಳೂರು.
- ಕಛೇರಿ ಪ್ರತಿ.